ಆಗುತ್ತದೆ. ಈ ವರ್ಷಾಂತ್ಯಕ್ಕೆ ಸಿನಿಮಾ ಮುಗಿಸುವ ಯೋಜನೆಯಿದೆ.

◆ **ಯಾವ ರೀತಿಯ ಕಥೆಗಳಿಗೆ ನಿರ್ದೇಶನ ಮಾಡುವ ಆಲೋಚನೆಯಿದೆ?**

ಎಲ್ಲ ರೀತಿಯ ಪ್ರಯೋಗವನ್ನೂ ಮಾಡಬೇಕು, ಒಂದು ವರ್ಗಕ್ಕೆ ಸೀಮಿತವಾಗಬಾರದು ಎಂದು ನಿರ್ಧಾರ ಮಾಡಿದ್ದೇನೆ. ಇದೇ 'ಪ್ಯಾಟರ್ನ್' ಎಂದು ಫಿಕ್ಸ್ ಆಗಬಾರದು. ಹೀಗೆ ಫಿಕ್ಸ್ ಆದರೆ ಕೆಲವೇ ಸಿನಿಮಾಗಳಿಗೆ ಎಲ್ಲ ಖಾಲಿಯಾಗಿಬಿಡುವ ಅನುಭವ ಆಗುತ್ತದೆ. 'ಪ್ರೀಮಿಯರ್ ಪದ್ಮಿನಿ' ಸಿನಿಮಾದಲ್ಲಿ ಫ್ಯಾಮಿಲಿ ಡ್ರಾಮಾ ಇತ್ತು. ಈಗ ಮಾಡುತ್ತಿರುವ ಹೊಸ ಸಿನಿಮಾ, ಸ್ನೇಹ–ಸಂಬಂಧಗಳ ಕುರಿತಾದ್ದು. ಮತ್ತೊಂದು ಕ್ರೈಂ ಡ್ರಾಮಾ ಬರೆದಿದ್ದೇನೆ. ತದ ನಂತರ 1960ನೇ ಇಸವಿಯಲ್ಲಿ ನಡೆದಿರುವ ಘಟನೆಯ ಕಥೆಯ ಎಳೆಯೊಂದು ಮನಸ್ಸಿನಲ್ಲಿದೆ, ಮತ್ತೂ ಒಂದು ಕಥೆ ಲೈನ್‌ನಲ್ಲಿದೆ. ಹೀಗೆ ಬೇರೆ ಬೇರೆ ಆಯಾಮ, ಕಥಾಹಂದರದ ಸಿನಿಮಾಗಳನ್ನು ನೀಡುವ ಆಲೋಚನೆಯಿದೆ. ಓದಿ, ರಿಸರ್ಚ್ ಮಾಡಿ ಬೇರೆ ಬೇರೆಯ ಧಾಟಿಯ ಸಿನಿಮಾಗಳನ್ನು ಮಾಡುವ ಹಂಬಲವಿದೆ.

◆ **ಖಳನಾಯಕನ ಪಾತ್ರಕ್ಕೇ ನಿಮ್ಮನ್ನು 'ಟೈಪ್‌ಕಾಸ್ಟ್' ಮಾಡುವ ಸಾಧ್ಯತೆ?**

ಟೈಪ್‌ಕಾಸ್ಟ್ ಆದರೂ ಅದನ್ನು ನಾವೇ ಬ್ರೇಕ್ ಮಾಡಬೇಕು. ಖಳ ಅಂದರೆ ಅವನ ಉದ್ದೇಶ ಒಂದೇ. ತೊಂದರೆ ಮಾಡುವುದು. ತೊಂದರೆಯ ನಮೂನೆಗಳು ಬೇರೆಬೇರೆ. ಇಲ್ಲಿ ನಾವು ಹಿಡಿದುಕೊಳ್ಳಬೇಕಾದುದು ಹಾವಭಾವ ಹಾಗೂ ಹಿನ್ನೆಲೆಯನ್ನು. ಅದರ ಮೇಲೆ ಸ್ವಲ್ಪ ಕೆಲಸ ಮಾಡಬೇಕು. ಇರುವ ಚೌಕಟ್ಟಿನೊಳಗೇ ಅದನ್ನು ಬ್ರೇಕ್ ಮಾಡಲು ಪ್ರಯತ್ನಿಸಬೇಕು. ಇಲ್ಲದೇ ಹೋದರೆ ಪ್ರಯೋಜನವಿಲ್ಲ. ಸಾಂಬಾರ್ ಪುಡಿ ಒಂದೇ. ಆದರೆ ಅದಕ್ಕೆ ಬೇರೆ ಬೇರೆ ತರಕಾರಿ ಹಾಕಿ ಸಾಂಬಾರ್ ಮಾಡುತ್ತೀವಲ್ಲ, ಹಾಗೆ.

◆ **ಸದ್ಯ ಯಾವ ಸಿನಿಮಾಗಳಲ್ಲಿ ತೊಡಗಿಕೊಂಡಿದ್ದೀರಿ?**

ಸದ್ಯಕ್ಕೆ 'ಕರಾವಳಿ' ಸಿನಿಮಾದಲ್ಲಿದ್ದೇನೆ. 'ಉತ್ತರಕಾಂಡ' ಸಿನಿಮಾ ಸಂಬಂಧ ಮಾತುಕತೆ ನಡೆಯುತ್ತಿದೆ. ಎರಡು ತಮಿಳು ಸಿನಿಮಾಗಳನ್ನು ಒಪ್ಪಿಕೊಳ್ಳುವ ಸಾಧ್ಯತೆಯಿದೆ.

◆ **ನಿಮ್ಮ ಹಾದಿಯನ್ನು ಈಗ ತಿರುಗಿ ನೋಡಿದರೆ ಏನನ್ನಿಸುತ್ತದೆ?**

ಇನ್ನೂ ಸಾಕಷ್ಟು ದೂರ ಕ್ರಮಿಸಬೇಕಿದೆ. ಇಲ್ಲಿಂದ ಮುಂದೆ ರಾಷ್ಟ್ರ ಮಟ್ಟದಲ್ಲಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಬೇಕು ಎಂಬ ಆಸೆಯಿದೆ. ನಿರ್ದೇಶನ, ನಟನೆ, ಬರವಣಿಗೆ ಮೂರರಲ್ಲೂ ನನ್ನದೊಂದು ಛಾಪು ಮೂಡಿಸಬೇಕು ಎನಿಸಿದೆ. ಎಷ್ಟರ ಮಟ್ಟಿಗೆ ಸಾಕಾರ ಆಗುತ್ತದೆ ನೋಡಬೇಕು. ■

# ವಿಕ್ರಂಗೆ 'ಮುಧೋಳ್' ಬಲ

'ಮುಧೋಳ್' ಸಿನಿಮಾ ಕ್ಲೈಮ್ಯಾಕ್ಸ್ ಚಿತ್ರೀಕರಣ ವೇಳೆ ಭುಜಕ್ಕೆ ಪೆಟ್ಟು ಮಾಡಿಕೊಂಡಿದ್ದ ನಟ ವಿಕ್ರಂ ರವಿಚಂದ್ರನ್ ಈಗ ಚೇತರಿಸಿಕೊಂಡಿದ್ದು, ಶೀಘ್ರವೇ ಸಿನಿಮಾ ಪೂರ್ಣಗೊಳಿಸುವುದಾಗಿ ಹೇಳಿದ್ದಾರೆ.

ಮುಧೋಳ್ ಸಿನಿಮಾದಲ್ಲಿ ವಿಕ್ರಂ, ನಟನಾಗಿ ಮಾತ್ರವಲ್ಲ, ನಿರ್ಮಾಪಕನ ಹೊಣೆಯನ್ನೂ ಹೊತ್ತಿದ್ದಾರೆ. ಹೀಗಾಗಿ ಈ ಸಿನಿಮಾ ತಮ್ಮ ವೃತ್ತಿಜೀವನದಲ್ಲಿ ಬಹಳ ಮಹತ್ವದ್ದು ಎಂದಿದ್ದಾರೆ.

ಮುಧೋಳ್ ಸಿನಿಮಾ ಕುರಿತು ಮಾತನಾಡಿ, "ಮುಧೋಳ್' ಬರೀ ಸಿನಿಮಾ ಅಲ್ಲ, ಇದು ನನ್ನ ಕರಿಯರ್ ಅನ್ನು ಮುಂದಕ್ಕೆ ತೆಗೆದುಕೊಂಡು ಹೋಗುವ ಸಿನಿಮಾ ಎಂದುಕೊಂಡಿದ್ದೇನೆ. ನನ್ನ ವಯೋಮಾನದ ನಟರು ಆರಿಸಿಕೊಳ್ಳದಂಥ ವಿಷಯವನ್ನು ನಾನು ಆಯ್ಕೆ ಮಾಡಿಕೊಂಡಿದ್ದೇನೆ" ಎಂದಿದ್ದಾರೆ.



ಹಿನ್ನಡೆಗಳ ಹೊರತಾಗಿಯೂ ತಮ್ಮ ಆತ್ಮವಿಶ್ವಾಸ ಹೆಚ್ಚಾಗಿರುವುದಾಗಿ ವಿಕ್ರಂ ಹೇಳಿದ್ದಾರೆ. ಕಾರ್ತಿಕ್ ರಾಜನ್ ನಿರ್ದೇಶನದ ಈ ಚಿತ್ರ ನಿರೀಕ್ಷೆಗಿಂತ ದೊಡ್ಡ ಮಟ್ಟದಲ್ಲಿ ಇರಲಿದೆ ಎಂದೂ ಭರವಸೆ ವ್ಯಕ್ತಪಡಿಸಿದ್ದಾರೆ.

ಇದೇ ಏಪ್ರಿಲ್ ತಿಂಗಳಿನಲ್ಲಿ ಸಿನಿಮಾದ ಆರು ದಿನಗಳ ಆ್ಯಕ್ಷನ್ ದೃಶ್ಯೀಕರಣದಲ್ಲಿ ತೊಡಗಿದ್ದಾಗ ವಿಕ್ರಂ ಭುಜಕ್ಕೆ ಪೆಟ್ಟಾಗಿತ್ತು. ಸದ್ಯಕ್ಕೆ ಎರಡು ಹಾಡುಗಳು ಹಾಗೂ ಕೆಲವೇ ದೃಶ್ಯಗಳು ಬಾಕಿಯಿದ್ದು, ಇದೇ ವರ್ಷ ಸಿನಿಮಾ ಬಿಡುಗಡೆಯಾಗಲಿದೆ ಎಂದಿದ್ದಾರೆ ವಿಕ್ರಂ. 2024ರ ಸೆಕೆಂಡ್ ಹಾಫ್‌ನಲ್ಲಿ ಭಿನ್ನ ಭಿನ್ನ ಪಾತ್ರಗಳಲ್ಲಿ ಹೊಸ ಹೊಸ ನಿರ್ದೇಶಕರೊಂದಿಗೆ ತೊಡಗಿಕೊಳ್ಳುತ್ತಿರುವುದಾಗಿಯೂ ಮಾಹಿತಿ ನೀಡಿದ್ದಾರೆ. ■

# ಕನ್ನಡ ಹುಡುಗಿ ಸ್ಟೆಫಿ ಪಟೇಲ್



'ಲವ್‌ಲೀ' ಚಿತ್ರದ ಮೂಲಕ ಕನ್ನಡ ಸಿನಿಮಾರಂಗಕ್ಕೆ ಪದಾರ್ಪಣೆ ಮಾಡಿರುವ ನಟಿ ಸ್ಟೆಫಿ ಪಟೇಲ್, 'ಕನ್ನಡ ಹುಡುಗಿ' ಎಂದು ಜನರ ಬಾಯಲ್ಲಿ ಕರೆಸಿಕೊಳ್ಳುವ ಆಸೆಯೊಂದಿಗೆ ಹೆಜ್ಜೆ ಇಟ್ಟಿದ್ದಾರೆ.

ಜಾರ್ಖಂಡ್ ಮೂಲದ ಸ್ಟೆಫಿ, ತೆಲುಗು ಹಾಗೂ ತಮಿಳು ಸಿನಿಮಾಗಳಲ್ಲಿ ಗುರುತಿಸಿಕೊಂಡಿದ್ದಾರೆ. ವಸಿಷ್ಠ ಸಿಂಹ ಜೊತೆ ಸಿನಿಮಾದಲ್ಲಿ ನಟಿಸಿ, ಇದೀಗ ಕನ್ನಡ ಸಿನಿಮಾರಂಗದಲ್ಲಿಯೂ ಮುಂದುವರೆಯುವ ಅಭಿಲಾಷೆ ವ್ಯಕ್ತಪಡಿಸಿದ್ದಾರೆ. ಕನ್ನಡ ಭಾಷೆಯನ್ನು ಕಲಿಯುವ ಹುಮ್ಮಸ್ಸನ್ನೂ ತೋರಿದ್ದಾರೆ.

'ತೆಲುಗು ಹಾಗೂ ತಮಿಳು ಸಿನಿಮಾಗಳಲ್ಲಿ ಕೆಲಸ ಮಾಡುವಾಗ ಕನ್ನಡ ಸಿನಿಮಾರಂಗದ ಬಗ್ಗೆಯೂ ಕೇಳಿದ್ದೆ. ಕನ್ನಡದಲ್ಲಿ 'ಲವ್‌ಲೀ' ಸಿನಿಮಾ ಅವಕಾಶ ಸಿಕ್ಕಿತು. ಚಿತ್ರೀಕರಣ ನಡೆಯುವಾಗ ಕನ್ನಡ ಭಾಷೆ ಕೇಳುತ್ತಿದ್ದೆ. ನನಗೆ ಇಲ್ಲಿನ ಆಹಾರವೂ ತುಂಬಾ ಇಷ್ಟ. ಮೊದಲು ನಟಿಯಾಗಿ ಬಂದವಳು ನಂತರ ಕುಟುಂಬದವಳೇ ಆದೆ. ಬೆಂಗಳೂರಷ್ಟೇ ಅಲ್ಲ, ಇಡೀ ಕರ್ನಾಟಕದ ಜೊತೆ ಪ್ರೀತಿಯಲ್ಲಿ ಬಿದ್ದೆ. ನಾನು ಕನ್ನಡ ಹುಡುಗಿ ಆಗಬೇಕು' ಎಂದು ಅಭಿಮಾನದ ಮಾತುಗಳನ್ನು ಆಡಿದ್ದಾರೆ. ■